# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 340
2) ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 14-02-2024
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದಿಂದ ನಡೆಸುತ್ತಿರುವ ಮತ್ಸ್ಯದರ್ಶಿನಿಗಳು ಎಷ್ಟು; ಯಾವ ಜಿಲ್ಲೆಗಳಲ್ಲಿ ಮತ್ಸ್ಯದರ್ಶಿನಿಗಳು ಕಾರ್ಯನಿರತವಾಗಿವೆ; | ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಮೂಲಕ 06 ಮತ್ಸ್ಯದರ್ಶಿನಿಗಳನ್ನು ನಡೆಸಲಾಗುತ್ತಿದೆ. ಲೈಸನ್ಸ್ ಆಧಾರದ ಮೇಲೆ 03 ಮತ್ಸ್ಯದರ್ಶಿನಿಗಳು ಮತ್ತು ಏಜೆನ್ಸಿ ಮೂಲಕ 16 ಮತ್ಸ್ಯದರ್ಶಿನಿಗಳು ಕಾರ್ಯ ನಿರ್ವಹಿಸುತ್ತಲಿವೆ. ಜಿಲ್ಲಾವಾರು ವಿವರವನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ. |
| ಆ) | ಬೆಂಗಳೂರು ಕಬ್ಬನ್ ಪಾರ್ಕ್ ನಲ್ಲಿರುವ ಮತ್ಸ್ಯದರ್ಶಿನಿಯು ಲಾಭದಾಯಕವಾಗಿ ನಡೆಯು ತ್ತಿದೆಯೇ; ಮತ್ಸ್ಯದರ್ಶಿನಿಗೆ ಸಾವಿರಾರು ಜನರು ಊಟ ಉಪಚಾರಕ್ಕಾಗಿ ಬರುತ್ತಿದ್ದು, ಈ ಮತ್ಸ್ಯದರ್ಶಿನಿಯ ಗುಣಮಟ್ಟ ವನ್ನು ಶುಚಿತ್ವವನ್ನು ಕಾಪಾಡಲು ನಿಗಮವು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ; ಬಂದಿದ್ದಲ್ಲಿ, ಆಹಾರದ ಗುಣಮಟ್ಟ ಮತ್ತು ಶುಚಿತ್ವವನ್ನು ಕಾಪಾಡುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಬೆಂಗಳೂರು ಕಬ್ಬನ್‌ಪಾರ್ಕ್‌ನಲ್ಲಿರುವ ಮತ್ಸ್ಯದರ್ಶಿನಿಯು ಲಾಭದಾಯಕವಾಗಿ ನಡೆಯುತ್ತಿದೆ.<br><br>ಮತ್ಸ್ಯದರ್ಶಿನಿ ಮೀನು ಉಪಹಾರ ಗೃಹದಲ್ಲಿ ಸ್ವಚ್ಛತೆಗಾಗಿ ಮೊದಲ ಪ್ರಾಮುಖ್ಯತೆಯನ್ನು ನೀಡ ಲಾಗಿದ್ದು, ಉತ್ಪಾದನೆಯಾಗುವ ತ್ಯಾಜ್ಯ ವಸ್ತುಗಳನ್ನು ನಿಯಮಾನುಸಾರ ವಿಲೇವಾರಿ ಮಾಡಲಾಗುತ್ತಿದೆ. ಉಪಹಾರ ಗೃಹದ ಒಳಗೆ ಮತ್ತು ಹೊರ ಆವರಣದಲ್ಲಿ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡು ಶುಚಿತ್ವವನ್ನು ಕಾಪಾಡಿಕೊಂಡು ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲಾಗುತ್ತಿದೆ.<br><br>ಬೆಂಗಳೂರು ಕಬ್ಬನ್‌ಪಾರ್ಕ್‌ನಲ್ಲಿರುವ ಮತ್ಸ್ಯದರ್ಶಿನಿ ಯಲ್ಲಿ ತಯಾರಿಸಲಾಗುವ ಮೀನಿನ ಖಾದ್ಯ ಮತ್ತು ಉತ್ಪನ್ನಗಳ ಗುಣಮಟ್ಟವನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಂಡು ಉತ್ತಮ ಗುಣಮಟ್ಟದ ಊಟ ಉಪಚಾರವನ್ನು ಸಾರ್ವಜನಿಕರಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಒದಗಿಸಲಾಗುತ್ತಿದೆ.<br><br>ಮತ್ಸ್ಯದರ್ಶಿನಿಯ ಗುಣಮಟ್ಟದ ತಪಾಸಣೆಯನ್ನು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ವತಿಯಿಂದ ನಡೆಸುತ್ತಿದ್ದು, ಗುಣಮಟ್ಟ ಮತ್ತು ಶುಚಿತ್ವವನ್ನು ಕಾಪಾಡಲು ನಿಗಮವು ವಿಫಲವಾಗಿರುವ ಬಗ್ಗೆ ಇದುವರೆಗೆ ಯಾವುದೇ ಆಕ್ಷೇಪಗಳು ಬಂದಿರುವುದಿಲ್ಲ. |

ಸಂಖ್ಯೆ: ಪಸಂಮೀ ಇ-23 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

# ಅನುಬಂಧ

ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದಿಂದ ಜಿಲ್ಲೆಗಳಲ್ಲಿ ನಡೆಸುತ್ತಿರುವ
ಮತ್ಸ್ಯದರ್ಶಿನಿಗಳ ವಿವರ

| ಕ್ರ. ಸಂ | ಜಿಲ್ಲೆ | ನಿಗಮದ ಮೂಲಕ ನಡೆಸುತ್ತಿರುವ ಮತ್ಸ್ಯದರ್ಶಿನಿ | ಲೈಸೆನ್ಸ್ ಅಧಾರದ ಮೇಲೆ ನಡೆಸುತ್ತಿರುವ ಮತ್ಸ್ಯದರ್ಶಿನಿ | ಏಜಿನ್ಸಿ ರೂಪದಲ್ಲಿ ನಡೆಸುತ್ತಿರುವ ಮತ್ಸ್ಯ ದರ್ಶಿನಿ | ಒಟ್ಟು ಮತ್ಸ್ಯ ದರ್ಶಿನಿ ಗಳು |
|---|---|---|---|---|---|
| 1. | ತುಮಕೂರು | 1 | - | - | 1 |
| 2. | ಕೋಲಾರ | 1 | - | - | 1 |
| 3. | ದಕ್ಷಿಣ ಕನ್ನಡ | 3 | - | 1 | 4 |
| 4. | ಬೆಂಗಳೂರು ನಗರ | 1 | 1 | 15 | 17 |
| 5. | ಮೈಸೂರು | - | 1 | - | 1 |
| 6. | ಬಳ್ಳಾರಿ | - | 1 | - | 1 |
| **ಒಟ್ಟು** | | **6** | **3** | **16** | **25** |